ಸ್ವದೇಶಿ ವಸ್ತು ಬಳಸಿ: ಮುನಿರಾಜು

ಬಾಗಲಗುಂಟೆಯಲ್ಲಿ ಸ್ವದೇಶಿ ಜಾಗರಣ ಮಂಚ್‌ನಿಂದ ಮೇಳ



ಸ್ವದೇಶಿ ಜಾಗರಣ ಮಂಚ್‌ನಿಂದ ಸ್ವದೇಶಿ ಮೇಳ ನಡೆಯಿತು.

ಪೀಣ್ಯ ದಾಸರಹಳ್ಳಿ: ಕೃಷಿ, ಸಣ್ಣ ಕೈಗಾರಿಕೆ, ಸಣ್ಣ ವ್ಯಾಪಾರ ಮತ್ತು ಸ್ವಯಂ ಉದ್ಯೋಗಗಳಿಂದ ಶೇ. 96ರಷ್ಟು ಉದ್ಯೋಗ ಸೃಷ್ಟಿಯಾಗುತ್ತಿದೆ' ಎಂದು ಸ್ವದೇಶಿ ಜಾಗರಣ ಮಂಚ್ ಕ್ಷೇತ್ರ ಸಂಘಟನಾ ಕಾರ್ಯದರ್ಶಿ ಜಗದೀಶ್ ತಿಳಿಸಿದರು.

ಬಾಗಲಗುಂಟೆಯ ಎಂಇಐ ಆಟದ ಮೈದಾನದಲ್ಲಿ ಸ್ವದೇಶಿ ಜಾಗರಣ ಮಂಚ್-ಕರ್ನಾಟಕ ವತಿಯಿಂದ ಆಯೋಜಿಸಿದ್ದ ಸ್ವದೇಶಿ 2ನೇ ದಿನದ ಮೇಳದಲ್ಲಿ "ನಿರುದ್ಯೋಗ ಸಮಸ್ಯೆ ಮತ್ತು ಪರಿಹಾರ ಮಾರ್ಗಗಳು" ಎಂಬ ವಿಷಯ ಕುರಿತು ಯುವ ಸಮಾವೇಶದಲ್ಲಿ ಮಾತನಾಡಿದರು.

ಉದ್ಯೋಗ ಹುಡುಕಬೇಡಿ- ಸೃಷ್ಟಿಸಿ ಎಂಬುದು ನಮ್ಮ ಸಿದ್ಧಾಂತವಾಗಿದೆ. ದೇಶದ ಉತ್ಪಾದಕರಿಗೆ ಸೂಕ್ತ ತಂತ್ರಜ್ಞಾನದ ಸಂಶೋಧನೆ, ಉತ್ಪನ್ನಗಳಿಗೆ ದೇಶಿಯ ಮಾರುಕಟ್ಟೆ, ರಫ್ತು ಮಾಡುವ ವ್ಯವಸ್ಥೆ ಆಗಬೇಕು. ಯುವ ಜನತೆಯಲ್ಲಿ ಉದ್ಯಮಶೀಲತೆಯ ಮಾನಸಿಕತೆಯನ್ನು ಬೆಳೆಸುವಂತಹ ಶಿಕ್ಷಣ, ಕಾಲೇಜುಗಳಲ್ಲಿ ಉದ್ಯೋಗ ಸೃಷ್ಟಿಸುವ ಕೌಶಲ್ಯ ತರಬೇತಿ ಸಿಗಬೇಕು ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ, ಹೆಚ್ಚು ಹೆಚ್ಚು ಸ್ವದೇಶಿ ವಸ್ತುಗಳನ್ನು ಬಳಸುವ ಮೂಲಕ ಇಲ್ಲಿನ ಉದ್ಯೋಗದ ಸಮಸ್ಯೆಯನ್ನು ನಿವಾರಿಸಬಹುದು. ದೇಶಿ ಉತ್ಪನ್ನಗಳ ಬೇಡಿಕೆಯನ್ನು ಹೆಚ್ಚಿಸಬೇಕು' ಎಂದು ತಿಳಿಸಿದರು. ಮೇಳದ ಸಂಘಟಕ ಸೌಂದರ್ಯ ಭರತ್ ಮಾತನಾಡಿ,' ಸಾವಿರಾರು ಜನ ಮೇಳ ವೀಕ್ಷಿಸಲು ಮತ್ತು ಮಾಹಿತಿ ಪಡೆಯಲು ತುಂಬಾ ಉತ್ಸುಕತೆಯಿಂದ ಬರುತ್ತಿದ್ದಾರೆ ಎಂದರು. ಈ ವೇಳೆ ಉದ್ಯಮಿ ರವಿ ಕುಲಾಲ್, ಸೌಂದರ್ಯ ಅಂಬಿಕ ಕಾಲೇಜಿನ ಪ್ರಾಶುಂಪಾಲೆ ಮೇಘನ, ಎಂ.ಎಸ್. ಪಿಯು ಕಾಲೇಜಿನ ಪ್ರಾಶುಂಪಾಲ ಮಲ್ಲಿಕಾರ್ಜುನ್, ಮೇಳದ ಸಂಯೋಜಕ ರವೀಂದ್ರ ಪೈ, ಸಂಘಟಕ ಭರತ್ ಸೌಂದರ್ಯ , ಸಹ ಸಂಘಟಕ ಲಕ್ಷ್ಮಿ ವೆಂಕಟೇಶ್ ಇತರರಿದ್ದರು.

ಅಧ್ಯಾತ್ಮವಿಲ್ಲದ ಭಾರತದ ಕಲ್ಪನೆಯೇ ಅಸಾಧ್ಯ: ಶೋಭಾ

ಅಧ್ಯಾತ್ಮ ಕ್ಷೇತ್ರದಲ್ಲಿ ಮೃತ್ಯುಂಜಯ ಸಾಧನೆ ಮಹತ್ವದ್ದು: ಕೇಂದ್ರ ಸಚಿವೆ | ಡಾ.ಬಿ.ಕೆ.ಮೃತ್ಯುಂಜಯ ಅವರ ಅಭಿನಂದನೆ-78 ಕಾರ್ಯಕ್ರಮ

■ ಉದಯವಾಣಿ ಸಮಾಚಾರ

ಬೆಂಗಳೂರು: ಭಾರತಕ್ಕೆ ಅಧ್ಯಾತ್ಮವೇ ಆತ್ಮ. ಆಧ್ಯಾತ್ಮವಿಲ್ಲದೆ ಭಾರತವಿಲ್ಲ. ಅಧ್ಯಾತ್ಮವಿಲ್ಲದ ಭಾರತದ ಕಲ್ಪನೆಯೇ ಅಸಾಧ್ಯ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಮೈಸೂರು ರಸ್ತೆ ಪೂರ್ಣಿಮಾ ಪ್ಯಾಲೇಸ್ ಕನ್‌ವೆನ್ಷನ್ ಸೆಂಟರ್‌ನಲ್ಲಿ ಗುರುವಾರ ನಡೆದ ರಾಜಸ್ಥಾನದ ಮೌಂಟ್ ಅಬುನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಅಡಿಷನಲ್ ಸೆಕ್ರಟರಿ ಜನರಲ್ ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ ಅವರ ಅಭಿನಂದನೆ-78 ಕಾರ್ಯಕ್ರಮದಲ್ಲಿ ಮಾತನಾಡಿದರು. ಆಧ್ಯಾತ್ಮನೆ ನಮ್ಮ ಶಕ್ತಿ. ನಮ್ಮ ವೈಚಾರಿಕತೆ ಬೇರೆ ಬೇರೆಯಾಗಿವೆ. ಆದರೆ ಭಾರತದಲ್ಲಿ ಮಾತ್ರ ವೈವಿಧ್ಯತೆಯಲ್ಲಿ ಏಕತೆಯನ್ನು ಕಾರಣಬಹುದು ಎಂದರು.

ಬಸವಣ್ಣನವರ ತತ್ವ ಪಾಲನೆ ಮಾಡುತ್ತಿದ್ದ ಕುಟುಂಬದ ವ್ಯಕ್ತಿ ಈಶ್ವರೀ ವಿವಿಯ ಆಧ್ಯಾತ್ಮಿಕ ಸೆಳತಕ್ಕೆ ಸಿಲುಕ್ಕಿದ್ದು, ಆಶ್ಚರ್ಯ. ಸಣ್ಣ ಹಳ್ಳಿಯ ಕೃಷಿ ಕುಟುಂಬದಲ್ಲಿ ಬೆಳೆದು ರಾಜಸ್ಥಾನದ ಮೌಂಟ್ ಅಬುನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಅಡಿಷನಲ್ ಸೆಕ್ರಟರಿ ಜನರಲ್ ಸೇವೆ ಸಲ್ಲಿಸುವುದು ಅಂದರೆ ಸಾಮಾನ್ಯ ಸಂಗತಿಯಲ್ಲ. ಈ ವಿಚಾರದಲ್ಲಿ ಡಾ.ಬಿ.ಕೆ.ಮೃತ್ಯುಂಜಯ ಅವರ ಆಧ್ಯಾತ್ಮ ಕ್ಷೇತ್ರದ ಸಾಧನೆ ಸ್ಮರಣೀಯ. ಅವರೊಬ್ಬ ಕನ್ನಡದ ಮಗ ಎಂದು ಹೇಳಿಕೊಳ್ಳಲು ಇಡೀ ಕನ್ನಡಿಗರಿಗೆ ಹೆಮ್ಮೆ ಎಂದು ಪ್ರಶಂಸಿಸಿದರು. 100ಕ್ಕೂ ಹೆಚ್ಚು ದೇಶಗಳಿಗೆ ಭೇಟಿ ನೀಡಿ ಧರ್ಮ ಪ್ರಚಾರ ಮಾಡಿದ್ದಾರೆ. ಬ್ರಹ್ಮಾಕುಮಾರಿ ಈಶ್ವರಿಯ ವಿಶ್ವ ವಿದ್ಯಾಲಯದಂತ ಅಧ್ಯಾತ್ಮಿಕ ಸಂಸ್ಥೆಯ ದೊಡ್ಡ ಹುದ್ದೆಗೇರಿದ್ದಾರೆ. ಪ್ರಾಮಾಣಿಕತೆ ಡಾ.ಬಿ.ಕೆ. ಮೃತ್ಯುಂಜಯ ಅವರನ್ನು ದೊಡ್ಡ ಹುದ್ದೆಗೆ ಏರಿಸಿದೆ ಎಂದು ಶ್ಲಾಘಿಸಿದರು.ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಾಡೋಜ ಡಾ.ಗೊ.ರೂ.ಚನ್ನಬಸಪ್ಪ, ಜೀವನದಲ್ಲಿ ಎರಡು ದಿನಗಳನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಒಂದು ನಾವು ಹುಟ್ಟಿದ ದಿನ ಮತ್ತೊಂದು ನಾವು ಹುಟ್ಟಿದ್ದೇಕೆ ಎಂದು ತಿಳಿದ ದಿನ. ಈ ಎರಡೂ ದಿನಗಳನ್ನ ಅರ್ಥ ಮಾಡಿಕೊಂಡರೆ ಬದುಕನ್ನು ಸಾರ್ಥಕತೆ ಮಾಡಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ ಅವರನ್ನು ಗಣ್ಯರು ಸನ್ಮಾನಿಸಿದರು.

ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ ಅವರು 19ನೇ ವಯಸ್ಸಿನಲ್ಲೆ ಬ್ರಹ್ಮಕುಮಾರಿಯ ಸಂಪರ್ಕಕ್ಕೆ ಬಂದು ಈಶ್ವರೀಯ ಸಿದ್ಧಾಂತದ ಮೋಡಿಗೆ ಮನಸೋತರು. ಇದೀಗ ವಿಶ್ವದ ಅತ್ಯಂತ ದೊಡ್ಡ ಆಧ್ಯಾತ್ಮಿಕ ಕೇಂದ್ರದ ಭಕ್ತಿ ಸರೋವರದಲ್ಲಿ ರಾಜಹಂಸದಂತಿದ್ದಾರೆ. ಕೊಡುವುದರಲ್ಲೇ ಪಡೆಯುವುದಿದೆ. ನಾವು ಪ್ರೀತಿಯನ್ನು ವಿಶ್ವಾಸ, ಮಮತೆಯನ್ನು ಇನ್ನೊಬ್ಬರಿಗೆ ಹಂಚಿದರೆ ಅವರೂ ನಮ್ಮ ಮೇಲೆ ಪ್ರೀತಿ, ಮಮತೆ ತೋರುತ್ತಾರೆ ಎಂಬುವುದನ್ನು ಮರೆಯಬಾರದು. ಇನ್ನೊಬ್ಬರನ್ನು ಕೆಡಕು ಮಾಡಿದರೆ ನಮಗೂ ಕೆಡಕ್ಕುಂಟಾಗುತ್ತದೆ ಎಂದು ಹೇಳಿದರು.

ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಬಿ.ಎಸ್.ಪರಮಶಿವಯ್ಯ ಮಾತನಾಡಿ, ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ ಅವರು ನನ್ನ ಸಹೋದರ ಎನ್ನಲು ನನಗೆ ಹೆಮ್ಮೆಯಾಗುತ್ತದೆ. ಸಿದ್ಧಗಂಗಾ ಶ್ರೀಗಳು ನನ್ನ ಸಹೋದರನನ್ನು ಸ್ವಾಮೀಜಿಯಾಗಿ ಮಾಡಲು ಹೊರಟ್ಟಿದ್ದರು. ಆದರೆ, ನಾವುಗಳು ಅದಕ್ಕೆ ಅವಕಾಶ ನೀಡಲಿಲ್ಲ. ಚಿಕ್ಕವಯಸ್ಸಿನಲ್ಲೇ ಆಧ್ಯಾತ್ಮಿಕತೆ ಬಗ್ಗೆ ಒಳವಿತ್ತು. ಈ ಹಿನ್ನೆಲೆಯಲ್ಲೇ ಬ್ರಹ್ಮಕುಮಾರಿ ಈಶ್ವರೀಯ ಸೇರಿದರು ಎಂದರು. ಇದೇ ವೇಳೆ ಅಭಿನಂದನ ಸಂಪುಟ ಬಿಡುಗಡೆ ಮಾಡಲಾಯಿತು.

ಸಮಾರಂಭದಲ್ಲಿ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು, ಸಿದ್ಧಗಂಗಾಮಠದ ಸಿದ್ಧಲಿಂಗ ಶ್ರೀಗಳು, ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಶ್ರೀಗಳು, ಮೋಟಗಿಮಠದ ಶ್ರೀ ಪ್ರಭು ಚೆನ್ನಬಸವ ಸ್ವಾಮೀಜಿಗಳು, ಹುಕ್ಕೇರಿಯ ಶ್ರೀಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಗಳು, ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ, ಮಾಜಿ ಮೇಯರ್‌ಗಂಗಾಂಬಿಕೆ ಮಲ್ಲಿಕಾರ್ಜುನ ಸೇರಿದಂತೆ ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ ಕುಟುಂಬದವರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಆಡಳಿತ ಜನಪರ: ಸೀತಾರಾಮ್

ಸಿದ್ದು ನೇತೃತ್ವದಲ್ಲಿ ಮುಂದಿನ ಚುನಾವಣೆ ನಡೆಯಲಿ: ಎಂಎಲ್‌ಸಿ ಡಾ.ಎಂ.ಆರ್. ಸೀತಾರಾಮ್

■ ಉದಯವಾಣಿ ಸಮಾಚಾರ

ಬೆಂಗಳೂರು: ಸಿದ್ದರಾಮಯ್ಯನವರ ಆಡಳಿತ ವೈಖರಿ, ಜನಪರ ನಡೆ, ನುಡಿಯ ಕುರಿತು ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ. ರಾಜ್ಯದ ಜನರಿಗೆ ಕಳೆದರಡೂ ಅವಧಿಗಳ ಅವರ ಕಾರ್ಯವೈಖರಿ ಅತ್ಯಂತ ಮೆಚ್ಚುಗೆಗಳಿಸಿದೆ ಎಂದು ವಿಧಾನ ಪರಿಷತ್ ಸದಸ್ಯ, ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಆರ್. ಸೀತಾರಾಮ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದ ಜನರ ತಲಾದಾಯ ವೃದ್ಧಿಯಲ್ಲಿ ಪ್ರಮುಖ ಕಾರಣ ಸಿದ್ದರಾಮಯ್ಯನವರು. ಏಕೆಂದರೆ, ರಾಜ್ಯದಲ್ಲಿ ಜನಪರ ಗ್ಯಾರಂಟಿಗಳಅನುಷ್ಠಾನದಿಂದಪ್ರತಿಯೊಬ್ಬರೂ ಆರ್ಥಿಕವಾಗಿ ಪ್ರಗತಿ ಹೊಂದುತ್ತಿದ್ದಾರೆ. ಸಂಚಾರ ಸಾರಿಗೆ ವ್ಯವಸ್ಥೆಯಲ್ಲೂ ಗಣನೀಯ ಏರಿಕೆ ಕಂಡಿದೆ. ಹೀಗಾಗಿ, ಆರ್ಥಿಕ ವಹಿವಾಟುಗಳು ರಾಜ್ಯದಲ್ಲಿ ಹೆಚ್ಚಾಗಿವೆ.ಈ ಪರಿಣಾಮ ಅರ್ಥವ್ಯವಸ್ಥೆ ವೃದ್ಧಿಗೆ ಹಾದಿ ಮಾಡಿಕೊಟ್ಟಿದೆ. ಈ ಹಣಕಾಸು ಚತುರತೆಯಿಂದಲೇ ಸಿದ್ದರಾಮಯ್ಯನವರು 16 ಬಜೆಟ್‌ಗಳನ್ನು ಮಂಡಿಸಲು ಸಾಧ್ಯವಾಗಿದೆ. ಡಿ.ದೇವರಾಜ ಅರಸು ಕಾಲಘಟ್ಟದ ಬಳಿಕ ಸಿದ್ದರಾಮಯ್ಯನವರ ಅವಧಿಯಲ್ಲಿ ಬಡವರ ಅಭ್ಯುದಯ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಾಧ್ಯವಾಗುತ್ತಿದೆ. ನೇರ, ದಿಟ್ಟ ನಡೆಯ ಸಿದ್ದರಾಮಯ್ಯನವರು, ಪ್ರಸ್ತುತ ಎಲ್ಲರನ್ನೂ ಒಟ್ಟಾಗಿ ಮುನ್ನಡೆಸುತ್ತಿದ್ದಾರೆ. ಈ ಆಡಳಿತ ಮತ್ತಷ್ಟು ವೃದ್ಧಿಸುವುದರೊಂದಿಗೆ ಮುಂದಿನ ಚುನಾವಣೆಯಲ್ಲೂ ಸಹ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಪಕ್ಷ ಮುಂದುವರೆಯಲಿ ಎಂದು ಹಾರೈಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಡಾ.ಸೀತಾರಾಮ್ ಅಭಿನಂದಿಸಿದರು.

2006ರಲ್ಲಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಅಹಿಂದ ಸಮಾವೇಶ ಸಂಘಟಿಸಿದಾಗಲೇ ಅನೇಕರು ಅವರನ್ನು ಅನುಸರಿಸಲು ಸಜ್ಜಾದರು. ಏಕೆಂದರೆ, ಸಿದ್ದರಾಮಯ್ಯನವರು ಯಾವುದೇ ತಾರತಮ್ಯವಿಲ್ಲದೇ, ಎಲ್ಲ ಮತಪಂಥಗಳ ಕಾರ್ಯಕರ್ತರನ್ನು ಅತ್ಯಂತ ಆತ್ಮೀಯವಾಗಿ ನಡೆಸಿಕೊಳ್ಳುತ್ತಿದ್ದರು. ಜತೆಗೆ, ಸಿದ್ದರಾಮಯ್ಯನವರನ್ನು ಅಹಿಂದ ನಾಯಕರೆಂದು ಕರೆಯುವ ಹಂತಕ್ಕೆ ಕರೆ ತಂದಿದೆ.

ವೈಯಕ್ತಿಕವಾಗಿ ನಾನು ಅವರನ್ನು ಒಟ್ಟು 3 ಬಜೆಟ್‌ಗಳನ್ನು ರೂಪಿಸುವಾಗ ಅತ್ಯಂತ ಹತ್ತಿರದಿಂದ ಕಂಡಿದ್ದೇನೆ. ಎಲ್ಲಾ ವರ್ಗ ಗಳ ಅಭ್ಯುದಯಕ್ಕೆ ಆದ್ಯತೆ ನೀಡಬೇಕೆನ್ನುವ ವಿಷಯದಲ್ಲಿ ಯಾವುದೇ ರಾಜಿಯಾಗದೇ ಯೋಜನೆಗಳನ್ನು ರೂಪಿಸುವಲ್ಲಿ ಅವರ ಕೊಡುಗೆ ಅಪಾರ ಎಂದು ಶ್ಲಾಘಿಸಿದರು.

ಕನ್ನಡಕ್ಕೊಬ್ಬನೇ ಕೈಲಾಸಂ, ಹೋಂ ರೂಲು ನಾಟಕ ಜ.12ಕ್ಕೆ ಪ್ರದರ್ಶನ

■ ಉದಯವಾಣಿ ಸಮಾಚಾರ

ಬೆಂಗಳೂರು: ಅಂತರಂಗ ತಂಡವು ಅಂಕಲ್ ಶ್ಯಾಮ್ ನೇತೃತ್ವದಲ್ಲಿ ಟಿ.ಪಿ.ಕೈಲಾಸಂರ ಹೋಂ ರೂಲು ನಾಟಕವನ್ನು ಹಾಗೂ ಶ್ರೀಧರ್‌ಯಡ್ರಾವಿಯವರ ನಿರ್ದೇಶನದ

ಕನ್ನಡಕ್ಕೊಬ್ಬನೇ ಕೈಲಾಸಂ ಏಕವ್ಯಕ್ತಿ ನಾಟಕವನ್ನು ಜ.12ರಂದು ಸಂಜೆ 7.15ಕ್ಕೆ ಮಲ್ಲತ್ತಹಳ್ಳಿಯಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಪ್ರದರ್ಶಿಸಲಾ ಗುತ್ತಿದೆ. ಈ ನಾಟಕದ ವಸ್ತು ಮನೆ ಯಜಮಾನ ರಾಮಣ್ಣ ಬೀದಿ ಯಲ್ಲಿ ಹೆಬ್ಬುಲಿ, ಮನೆಯಲ್ಲಿ ಸುಂಡಿಲಿ. ತನ್ನ ತಾಯಿ ಮತ್ತು ಹೆಂಡತಿಯ ಮಧ್ಯೆ ನರಳಾಡುವ ಪ್ರಾಣಿ. ಈ ದೃಶ್ಯಗಳು ಸಾಕಷ್ಟು ಹಾಸ್ಯ ಮತ್ತು ವಿಡಂಬನೆಯನ್ನು ಒಳಗೊಂಡಿದೆ. ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸಲಿದೆ. ಕನ್ನಡಕ್ಕೊಬ್ಬನೇ ಕೈಲಾಸಂ, ಕೈಲಾಸಂ ನಾಟಕಗಳು ಮತ್ತು ಜೀವನ ಸುತ್ತ ಹೆಣೆಯಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಟಿಕೆಟ್ ದರ 150 ರೂ. ಇರಲಿದೆ. ಆನ್‌ಲೈನ್ ಬುಕಿಂಗ್ ಬುಕ್ ಮೈ ಶೋ- ಬುಕ್ ಮೈ ಶೋದಲ್ಲೂ ಟಿಕೆಟ್ ಪಡೆಯಬಹುದು.

ಜ.21ರಿಂದ 5 ದಿನ ಇಂಟೆಕ್ಸ್ ಫಾರ್ಮಿಂಗ್-2026 ಪ್ರದರ್ಶನ

■ ಉದಯವಾಣಿ ಸಮಾಚಾರ

ಬೆಂಗಳೂರು: ಭಾರತೀಯ ಯಂತ್ರೋಪಕರಣಗಳ ತಯಾರಕರ ಸಂಘ (ಐಎಂಟಿಎಂಎ) ಇಂಟೆಕ್ಸ್ ಫಾರ್ಮಿಂಗ್ 2026 ಪ್ರದರ್ಶನವನ್ನು ಜ.21 ರಿಂದ 25ರವರೆಗೆ ಬೆಂಗಳೂರಿನ ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಆಯೋಜಿಸಲಾಗಿದೆ ಎಂದು ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೆಬಕ್ ದಾಸ್‌ಗುಪ್ತಾ ತಿಳಿಸಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಟೆಕ್ಸ್ ಫಾರ್ಮಿಂಗ್ 2026ರ ಜೊತೆಗೆ ಹಲವು ಉಪ-ಕಾರ್ಯಕ್ರಮಗಳು ನಡೆಯಲಿವೆ. ಅವುಗಳೆಂದರೆ, ಯಂತ್ರೋಪಕರಣಗಳ ಬಿಡಿಭಾಗಗಳು, ಮೆಟ್ರಾಲಜಿ ಉತ್ಪನ್ನಗಳು, ಸಿಎಡಿ / ಸಿಎಎಂ ಉಪಕರಣಗಳು ಮತ್ತು ಹೊಸ ತಾಂತ್ರಿಕ ಟ್ರೆಂಡ್ ಗಳ ಬಗ್ಗೆ ಮಾಹಿತಿ ಇರುವ ಟೂಲ್‌ಟೆಕ್, ಆಡಿಟಿವ್ ಮ್ಯಾನುಫ್ಯಾಕ್ಚರಿಂಗ್ ಮತ್ತು ಇಂಡಸ್ಟ್ರಿ 4.0ನ ಉತ್ಕೃಷ್ಟ ತಾಂತ್ರಿಕ ಪರಿಹಾರೋತ್ಪನ್ನಗಳನ್ನು ಪ್ರದರ್ಶಿಸಲಾಗುವ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವೆಲ್ಡಿಂಗ್ (ಐಐಡಬ್ಲ್ಯೂ-ಇಂಡಿಯಾ) ಸಹಯೋಗದೊಂದಿಗೆ ಹೊಸ ವೆಲ್ಡಿಂಗ್ ತಂತ್ರಜ್ಞಾನಗಳನ್ನು ವೆಲ್ಡ್ ಎಕ್ಸ್ ಪೋದಲ್ಲಿ ಪ್ರದರ್ಶಿಸಲಾಗುತ್ತದೆ ಎಂದರು.

ಜ.22,23ರಂದು ಮೆಟಲ್ ಫಾರ್ಮಿಂಗ್ ತಂತ್ರಜ್ಞಾನದ ಹೊಸ ಟ್ರೆಂಡ್ ಗಳ ಕುರಿತು 9ನೇ ಆವೃತ್ತಿಯ ಸೆಮಿನಾರ್‌ನ್ನು ಏರ್ಪಡಿಸಲಿದೆ. ಸಂಶೋಧನಾ ಸಂಸ್ಥೆಗಳು ತಮ್ಮ ಹೊಸ ಸಂಶೋಧನೆಗಳನ್ನು (ಆರ್ ಆ್ಯಂಡ್ ಡಿ) ಉದ್ಯಮದ ಮುಖಂಡರಿಗೆ ಪ್ರಸ್ತುತಪಡಿಸಲು ಐ2 ಅಕಾಡೆಮಿಯಾ ಸ್ಕ್ವೇರ್ ವೇದಿಕೆಯಾಗಿದೆ.

ರಾಜ್ಯದಲ್ಲಿ ಶೀಘ್ರ ಸಂಗೀತ ಶಿಕ್ಷಕರ ನೇಮಕಾತಿಗೆ ಆಗ್ರಹ

■ ಉದಯವಾಣಿ ಸಮಾಚಾರ

ಬೆಂಗಳೂರು: ರಾಜ್ಯ ಸರ್ಕಾರ ಪ್ರಾಥಮಿಕ, ಪ್ರೌಢಶಾಲೆ, ಅನುದಾನಿತ ಖಾಸಗಿ ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಸಂಗೀತ ಶಿಕ್ಷಕರ ನೇಮಕಾತಿಗೆ ಶೀಘ್ರ ಕ್ರಮವಹಿಸಬೇಕು ಎಂದು ನವ ಕರ್ನಾಟಕ ಸಂಗೀತ ಪದವೀಧರ ಸಂಘದ ರಾಜ್ಯಾಧ್ಯಕ್ಷ ಬಂಡಯ್ಯ ಎಸ್.ಹಿರೇಮಠ ಆಗ್ರಹಿಸಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು ವರ್ಷಗಳಿಂದ ಹಲವು ಕಲಾವಿದರು ಸಂಗೀತದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ವಿಶೇಷ ಸಂಗೀತ ಪರೀಕ್ಷೆಯಲ್ಲಿ ಸೀನಿಯರ್‌ಗ್ರೇಡ್, ವಿದ್ವಾತ್, ವಿಶಾರದ, ಸಂಗೀತ ಅಲಂಕಾರ, ವಿಶ್ವ ವಿದ್ಯಾಲಯಗಳು ನಡೆಸುವ ಬಿಎ ಮ್ಯೂಜಿಕ್, ಎಂಎ ಮ್ಯೂಜಿಕ್ ಹೀಗೆ ಹಲವು ಪದವಿ ಪೂರೈಸಿದ್ದಾರೆ. ಆದರೆ ನೇಮಕಾತಿಯಾಗದೆ ಇತ್ತ ಸರ್ಕಾರಿ ನೌಕರಿ ಇಲ್ಲದೆ, ಖಾಸಗಿ ಶಾಲೆಗಳಲ್ಲಿಯೂ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ ಎಂದರು. ಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಪ್ರಭು ಶಂಕರ್, ರಹಮಾನ್ ಸಾಬ್ ನದಾಫ್, ಜಗದೀಶ್ ಜಿ.ಸಿ., ಸತ್ಯವತಿ ದೇಶಪಾಂಡೆ, ಶಂಕರ್‌ಹಿರೇಮಠ್, ಶ್ರೀಶೈಲ್ ಬಿರಾದರ್, ಮಂಜುನಾಥ್ ಸ್ವಾಮಿ ಇತರರ ಉಪಸ್ಥಿತರಿದ್ದರು.

ಬೆಂಗಳೂರಿನ ಸುಮ್ಮನ ಹಳ್ಳಿಯ ಬಾಬುಜಗಜೀವನ ರಾವ ಸಭಾಭವನದಲ್ಲಿ ಕಾರ್ಡಿಯಲ್ ಉತ್ಕರ್ಷ್‌ನ 42ನೇ ಶಾಲಾ ವಾರ್ಷಿಕೋತ್ಸವ ನಡೆಯಿತು. ಸಂಸ್ಥೆ ಅಧ್ಯಕ್ಷ ವೇಣುಗೋಪಾಲ, ಕಾರ್ಯದರ್ಶಿ ವಾಸುದೇವನ, ಖಜಾಂಚಿ ಸತೀಶಕುಮಾರ ಮತ್ತಿತರರಿದ್ದರು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್,
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ,
ಬೆಂಗಳೂರು ದಕ್ಷಿಣ ಜಿಲ್ಲೆ

ಇ-ಪ್ರೊಕ್ಯೂರ್‌ಮ